**ಓ.ಎಸ್. ನಂಃ 324/2022**

**ಡಿ.ಡಬ್ಲ್ಯೂಃ 1**

**ದಿನಾಂಕ 15.04.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿಯ ಪರಃ ಶ್ರೀ.ಕೆ.ಬಿ.ಜಿ . ವಕೀಲರಿಂದಃ**

9. ಗೋಪಾಲಕೃಷ್ಣರವರ ತಾಯಿಯಾದ ಚನ್ನಮ್ಮರವರು ವಸಂತ ಕುಮಾರ್ ರವರಿಗೆ ಮಾಡಿದ್ದ ಬೋಗ್ಯವನ್ನು ಬಿಡುಗಡೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸರ್ವೇ ನಂಬರ್ 104/2 ರಲ್ಲಿ ಕೇವಲ 1 ಎಕರೆ 22 ಗುಂಟೆ ಜಮೀನು ಮಾತ್ರ ಸದರಿ ಚನ್ನಮ್ಮರವರಿಗೆ ಸೇರಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

10. ಗೋಪಾಲಕೃಷ್ಣರವರು ಸರ್ವೇ ನಂಬರ್ 104/2 ರಲ್ಲಿ ತಾವು ಸ್ವಾಧೀನದಲ್ಲಿದ್ದ ಜಮೀನನ್ನು ಮಾತ್ರ ನಿಮಗೆ ಮಾರಾಟ ಮಾಡಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಗೋಪಾಲಕೃಷ್ಣರವರು ಸರ್ವೇ ನಂಬರ್ 104/2 ರಲ್ಲಿ ತಾವು ಎಷ್ಟು ವಿಸ್ತೀರ್ಣದ ಜಮೀನಿನ ಸ್ವಾಧೀನದಲ್ಲಿ ಇದ್ದರು ಎಂದು ನಮಗೆ ಹೇಳಿರುವುದಿಲ್ಲ ಎಂದು ನುಡಿದಿರುತ್ತಾರೆ. ಯಾವ ಸರ್ವೇ ನಂಬರಿನಲ್ಲಿ ನಿಮಗೆ 10 ಅಥವಾ 18 ಗುಂಟೆ ಜಮೀನು ಇದೆ ಎಂದು ನಿಮಗೆ ಗೊತಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಬರಬೇಕಾದ ಸದರಿ ಜಮೀನು ಸರ್ವೇ ನಂಬರ್ 104/2 ರಲ್ಲಿದೆ ಎಂದು ನುಡಿದಿರುತ್ತಾರೆ.

11. ವಾದಿಗಳು ಮಧ್ಯ ಆದ ಪಾಲು ವಿಭಜನೆಯಲ್ಲಿ ದಾವಾ ಆಸ್ತಿಯು 2 ನೇ ವಾದಿಯ ಗಂಡನಾದ ಜನಾರ್ಧನ್‌ರವರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸರ್ವೇ ನಂಬರ್ 104/2 ರಲ್ಲಿ ನನಗೆ

ಸೇರಿದ ಕೇವಲ 1 ಎಕರೆ 22 ಗುಂಟೆ ಜಮೀನು ಮಾತ್ರ ಇದ್ದು, ನನಗೂ ಮತ್ತು ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**